1	2	3	4	5
12.	Davanagere	12000	11000	23000
13.	Gulbarga	18000	10750	28750
14.	Gadag	7800	5500	13300
15.	Hassan	12000	13750	25750
16.	Haveri	6000	7000	18000
17.	Kolar	11250	10450	21700
18.	Koppal	9000	8500	17500
19.	Mandya	3999	10,000	13999
20.	Mysore	9000	4400	13400
21.	Raichur	9000	6500	15500
22.	Shimoga	14000	3300	17300
23.	Tumkur	13801	10000	23801
24.	U. Kannada	2500	2750	5250
	Total	**200000**	**165000**	**365000**

ಅರಣ್ಯ ಭೂಮಿಯಲ್ಲಿ ಅಕ್ರಮ ಸಾಗುವಳಿ ಮಾಡಿದ ರೈತರ ಮೇಲಿನ ಮೊಕದ್ದಮೆ

590 (645) ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅರಣ್ಯ ಜಮೀನಿನಲ್ಲಿ ಅಕ್ರಮ ಸಾಗುವಳಿ ಮಾಡಿದ ರೈತರ ವಿರುದ್ಧ ನ್ಯಾಯಾಲಯದಲ್ಲಿ ಎಷ್ಟು ಮೊಕದ್ದಮೆಗಳು ಈವರೆಗೂ ದಾಖಲು ಮಾಡಲಾಗಿದೆ.

ಆ) ಮಾರ್ಚ್ 31 ರೊಳಗೆ ಅರಣ್ಯ ಭೂಮಿ ಒತ್ತುವರಿ ಸಾಗುವಳಿದಾರರನ್ನು ಒಕ್ಕಲೆಬ್ಬಿಸಲಾಗುವುದೆಂದು ಸರ್ಕಾರ ಸುಪ್ರೀಂ ಕೋರ್ಟಿಗೆ ಮುಚ್ಚಳಿಕೆ ಬರೆದುಕೊಟ್ಟಿದೆಯೇ;

ಇ) ಸಾರ್ವಜನಿಕರ ವಿರೋಧದ ಹಿನ್ನೆಲೆಯಲ್ಲಿ ಸುಪ್ರೀಂಕೋರ್ಟಿಗೆ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಲು ಯೋಚಿಸಲಾಗಿದೆಯೇ; ಇಲ್ಲದಿದ್ದಲ್ಲಿ ಇದರ ಅಗತ್ಯತೆ ಕಂಡುಬಂದಿಲ್ಲವೇ?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿರುವವರ ವಿರುದ್ಧ ನ್ಯಾಯಾಲಯದಲ್ಲಿ ಒಟ್ಟು 24,399 ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ.

ಆ) ಇಲ್ಲ.

ಇ) ಇಲ್ಲ, ಇದರ ಅಗತ್ಯತೆ ಕಂಡುಬಂದಿಲ್ಲ.

ಕಂದಾಯ ಇಲಾಖೆಯ ದಾಖಲೆಯಲ್ಲಿ ಅರಣ್ಯ ಜಮೀನು

591 (646) ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?